**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 679/2022 ಪ್ರಾ.ಸಾ -3**

**ಚಾ.ಸಾ – 3**

**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಥಮ್ ಪೂವಣ್ಣ |
| ತಂದೆಯ ಹೆಸರು | : | ಪೂಣಚ್ಚ |
| ವಯಸ್ಸು | : | 37 ವರ್ಷ |
| ಉದ್ಯೋಗ | : | Amazon ನಲ್ಲಿ Manager |
| ವಾಸ ಸ್ಥಳ | : | ಕೈಕೇರಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನನಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–**

ದಿ. 26.12.2021 ರಂದು ಸಂಜೆ 07.15 ಸಮಯದಲ್ಲಿ ಗೋಣಿಕೊಪ್ಪ ನಗರದಲ್ಲಿದ್ದಾಗ ಚಾಸಾ 2 ರವರು ನನಗೆ ದೂರವಾಣಿ ಕರೆ ಮಾಡಿ Classic hotel ಮುಂದೆ ಚಾಸಾ 1 ರವರಿಗೆ ಯಾರೋ ಒಬ್ಬ ವ್ಯಕ್ತಿ ಕಲ್ಲಿನಿಂದ ಹಲ್ಲೆ ಮಾಡಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಸ್ಥಳಕ್ಕೆ ಹೋದಾಗ ಚಾಸಾ 1 ರವರಿಗೆ ಹಣೆಯ ಮೇಲೆ ರಕ್ತ ಬರುತ್ತಿದ್ದು ಚಾಸಾ 1 ರವರನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆ ಎಂದರೆ ಸರಿಯಲ್ಲ. ಈ ಘಟನೆ ಬಗ್ಗೆ ಚಾಸಾ 1 ಮತ್ತು 2 ರವರನ್ನು ವಿಚಾರಿಸಿದಾಗ ಆರೋಪಿಯು ಗೋಣಿಕೊಪ್ಪ ಬೈ ಪಾಸ್ ರಸ್ತೆಯ ಜಯಲಕ್ಷ್ಮೀ ವೈನ್ ಶಾಪ್ ಸಮೀಪ ಚಾಸಾ 2 ರವರಿಗೆ ಆರೋಪಿ ಚೇಷ್ಟೆ ಮಾಡಿರುತ್ತಾನೆ

ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮನ್ನು ಆರೋಪಿ Classic hotel ಬಳಿ ಹಿಂಬಾಲಿಸಿಕೊಂಡು ಬಂದು ಚಾಸಾ 1 ರವರಿಗೆ ಮು ಮಾ 1 ಕಲ್ಲಿನಿಂದ ಹಲ್ಲೆ ಮಾಡಿದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಹಲ್ಲೆ ಮಾಡಿದ ವ್ಯಕ್ತಿ ಆರೋಪಿಯೇ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ.

ದಿ. 27.12.2021 ರಂದು ಗೋಣಿಕೊಪ್ಪ ಪೊಲೀಸರು ಜಯಲಕ್ಷ್ಮೀ ವೈನ್ ಶಾಪ್ ಮತ್ತು Classic hotel ಬಳಿ ಮಹಜರ್ ಕ್ರಮ ಜರುಗಿಸಬೇಕಾಗಿದೆ ಎಂದು ತಿಳಿಸಿದ್ದು ಕೃತ್ಯ ಸ್ಥಳವನ್ನು ಚಾಸಾ 1 ರವರು ತೋರಿಸಿಕೊಟ್ಟಂತೆ ಚಾಸಾ 4 ರವರೊಂದಿಗೆ ಜಯಲಕ್ಷ್ಮೀ ವೈನ್ ಶಾಪ್ ತೆರಳಿ ಬೆ. 08.30 ರಿಂದ 08.55 ತನಕ ಮಹಜರ್ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನಂತರ Classic hotel ಬಳಿ ಬೆ. 09.00 ರಿಂದ 09.45 ತನಕ ಮಹಜರ್ ಮಾಡಿ ನನ್ನ ಹಾಗೂ ಚಾಸಾ 4 ರವರ ಸಹಿ ಪಡೆದರು ಎಂದರೆ ಸರಿಯಲ್ಲ. ಸಾಕ್ಷಿಯು ನಿ ಪಿ 2 ಮತ್ತು 3 ಮಹಜರ್ ಗಳಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಗಳನ್ನು ನಿಪಿ 2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 4 ಮತ್ತು 5 ಫೋಟೋಗಳನ್ನು ನೋಡಿ ಗುರುತಿಸಿರುವುದಿಲ್ಲ.

ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದು ಆ ಹೇಳಿಕೆಯನ್ನು ಓದಿ ಹೇಳಿದ್ದು, ಅದನ್ನು ಅಲ್ಲಗೆಳೆದ ಕಾರಣ ಅದನ್ನು ನಿ. ಪಿ. 7 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ. ಬಿ. ಎ ವಕೀಲರಿಂದಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ